

# ಮದುವೆ ಎಂದರೆ ಸೀರೆ!

**ಶುಭ ಮುಹೂರ್ತದಲ್ಲಿ ನೆರವೇರುವ ವಿವಾಹ ಮಹೋತ್ಸವ ಸಂಪ್ರದಾಯಗಳೊಂದಿಗೆ ವೈಭವವೂ ಮೇಳೈಸುವ ಮಂಗಳ ಕಾರ್ಯ. ಈ ಕಾರ್ಯಕ್ರಮದುದ್ದಕ್ಕೂ ಆಹ್ವಾನಿತರ ಕೇಂದ್ರಬಿಂದುವಾಗಿರುವ ವಧುವಿನ ಉಡುಗೆಗಳು ಹೇಗಿರಬೇಕು? ಸಾಂಪ್ರದಾಯಕ ರೇಷ್ಮೆ ಸೀರೆಯೊಂದೇ ಸಾಕೇ ಅಥವಾ ಆಧುನಿಕ ಲೆಹೆಂಗಾ ಕೂಡಾ ಸೂಕ್ತವೇ?**

**★ ಸವಿತಾ ಶಾಂತಪ್ರಿಯ**

ಮದುವೆ ಎನ್ನುವುದು ಪ್ರತಿಯೊಬ್ಬರ ಬದುಕಲ್ಲೂ ಅಪೂರ್ವ ಕ್ಷಣ. ತಮ್ಮ ಆಯ್ಕೆಯ ಬಾಳ ಸಂಗಾತಿಯೊಂದಿಗೆ ಮುಂದಿನ ಜೀವನವನ್ನು ನಡೆಸುವುದಕ್ಕೆ ಹಿರಿಯರೆಲ್ಲ ಒಟ್ಟಾಗಿ ಆಶೀರ್ವದಿಸಿ ಶುಭ ಹಾರೈಸುವ ಮಂಗಳ ಮುಹೂರ್ತವದು. ಈ ಕ್ಷಣವನ್ನು ಅತ್ಯಂತ ಮಧುರವಾಗಿ ತಮ್ಮ ಬದುಕಿನುದ್ದಕ್ಕೂ ಕಟ್ಟಿಕೊಳ್ಳಬಹುದಾದ ನೆನಪಿನ ಬುತ್ತಿಯನ್ನಾಗಿ ಮಾರ್ಪಡಿಸಿಕೊಳ್ಳುವ ತವಕ ಮದುವೆಯಾಗುವವರದ್ದಷ್ಟೇ ಅಲ್ಲ, ಅವರ ಹೆತ್ತವರದ್ದೂ ಕೂಡಾ. ಹಾಗಾಗಿಯೇ ಮದುವೆ ತಯಾರಿಯನ್ನು ಅತ್ಯಂತ ಕಾಳಜಿ, ಆಸಕ್ತಿ ಮತ್ತು ಶ್ರದ್ಧೆಯಿಂದ ನಡೆಸುತ್ತಾರೆ.

ಮದುವೆಯ ತಯಾರಿಯೆಂದರೆ ಸುಲಭವೇನಲ್ಲ. ಮದುವೆಯ ಛತ್ರ, ಮಂಟಪ, ಭಕ್ಷ್ಯ– ಭೋಜನ, ಊಟ, ಉಪಚಾರ, ಅಲಂಕಾರ, ವೈಶಿಷ್ಟ್ಯಪೂರ್ಣ ಆಮಂತ್ರಣ ಪತ್ರಗಳು ಇವೆಲ್ಲದರ ಜೊತೆಗೆ ಮದುಮಕ್ಕಳ ತಯಾರಿ, ಅವರ ಸೀರೆ, ಬಟ್ಟೆ, ಅಲಂಕಾರ – ಈ ಎಲ್ಲ ತಯಾರಿಯೂ ಜೊತೆಗೂಡಿರುತ್ತದೆ. ಇದನ್ನೆಲ್ಲ ಪ್ರೀತಿಯಿಂದ, ಸಂಭ್ರಮದಿಂದ, ಆಸ್ಥೆಯಿಂದ ಹೆತ್ತವರು ಮತ್ತು ಸಂಬಂಧಿಕರು ಮಾಡಿಯೇ ಮಾಡುತ್ತಾರೆ.

ಮದುವೆಯೆಂದರೆ ಕೇವಲ ಒಂದೇ ದಿನದ ಕಾರ್ಯಕ್ರಮವಲ್ಲ. ಸಂಪ್ರದಾಯಸ್ಥ ರೀತಿಯಾದರೆ ನಾಂದಿಯಿಂದ ಆರಂಭಿಸಿ ವರಪೂಜೆ, ಕಾಶೀಯಾತ್ರೆ, ಮದುವೆ, ಆರತಕ್ಷತೆ ಮುಂತಾದ ಕಾರ್ಯಕ್ರಮಗಳಿರುತ್ತವೆ. ಆಧುನಿಕ ರೀತಿಯದಾದರೆ ಇವೆಲ್ಲದರ ಜೊತೆಗೆ ರಿಸೆಪ್ಶನ್, ಬ್ಯಾಚುಲರ್ ಪಾರ್ಟಿ, ಗೆಟ್ ಟುಗೆದರ್, ಪಾರ್ಟಿ ಎಂದೆಲ್ಲಾ ಆಯೋಜಿಸುತ್ತಾರೆ. ಕೆಲವೆಡೆ ಒಂದಿಷ್ಟು ಪಾರಂಪರಿಕ